ಕಥೆ

# ಜನವರಿ ತಿಂಗಳ ಪ್ರೀತಿ






ತೆಲುಗು: **ವಿ.ಚಂದ್ರಶೇಖರ ರಾವ್**

ಕನ್ನಡಕ್ಕೆ: **ಸೃಜನ್**

ಕಲೆ: ಎಂ.ವಿ. ಮಂಜುನಾಥ್


**ಜನವರಿ ಎಂಟು.**

ಆಕೆಯ ಬದುಕಿನಲ್ಲಿ ಅತ್ಯಂತ ಮುಖ್ಯವಾದ ದಿನ. ಎಂಥ ಕೆಲಸಗಳ ಒತ್ತಡದಲ್ಲೂ ಆ ಸಮಯಕ್ಕೆ ಆಕೆ 'ಚಿಲ್ಕಾ'ಗೆ ಬಂದೇ ಬರುತ್ತಾಳೆ. ಚಳಿಗಾಲದ ಬೆಳ್ಳಂಬೆಳಗ್ಗೆ 'ಬಾಲೂಗಾವ್ ರೇಲ್ವೇ ಸ್ಟೇಶನ್'ನಲ್ಲಿ ಇಳಿದು ಆಟೋದಲ್ಲೋ ಟ್ಯಾಕ್ಸಿಯಲ್ಲೋ ಚಿಲ್ಕಾ ಸರೋವರದ ದಡದಲ್ಲಿರುವ ಪ್ರವಾಸೋದ್ಯಮ ಇಲಾಖೆಯ ಕಾಟೇಜಿಗೆ ಬರುತ್ತಾಳೆ. ಕಾಟೇಜ್ ಎ.ಸಿ. ಕೋಣೆಯ ಗಾಜಿನ ಕಿಟಕಿಗಳಿಂದ ಸರೋವರವನ್ನು ಸೂರ್ಯನನ್ನು ನೋಡತೊಡಗುತ್ತಾಳೆ. ಕಿಟಕಿಯ ಗಾಜಿನ ಮೇಲೆ ಗುಂಪುಗುಂಪಾಗಿ ನೀಲಿ ಹಕ್ಕಿಗಳು ಉದ್ದನೆ ಕೊಕ್ಕಿನಿಂದ ಟಕ್ ಟಕ್ ಎಂದು ಸದ್ದು ಮಾಡುತ್ತಿದ್ದವು.

ಆ ಹಕ್ಕಿಗಳು ತಮ್ಮ ಮೃದುವಾದ ಕತ್ತು, ಉದ್ದನೆಯ ನೀಲಿಬಣ್ಣದ ಗರಿಗಳೊಂದಿಗೆ, ಬೆಳಕು ಚಿಮ್ಮುವ ಕಣ್ಣುಗಳಿಂದ, ಆಕೆಯ ಕಡೆಗೆ ನೋಡುತ್ತಿದ್ದವು. ಆಕೆ ಸೋಮಾರಿಯಂತೆ ಎದ್ದು ಸ್ನಾನ ಮಾಡಿ, ಸೀರೆ ಉಟ್ಟು ಕಾಫಿ ಕುಡಿದು ಹೊರಗೆ ಹೆಜ್ಜೆ ಇಡುತ್ತಿದ್ದಂತೆ ಆಕೆಯ ಸುತ್ತಲೂ ವೃತ್ತಾಕಾರದಲ್ಲಿ ಗಿರಕಿ ಹೊಡೆಯತೊಡಗಿದ ಹಕ್ಕಿಗಳನ್ನು 'ಶ್... ಶ್...' ಎಂದು ಓಡಿಸಿದರೂ ಅವು ಆಕೆಯನ್ನು ಮಾತನಾಡಿಸಲು ಬೆನ್ನು ಹತ್ತಿದವು.

ಆಕೆ ಸರೋವರದ ಸೌಂದರ್ಯದ ಬೆರಗಿನಿಂದ ಹೊರಬಂದು ಪಕ್ಕದ ರಸ್ತೆಯ ಮೇಲೆ ಹೆಜ್ಜೆ ಹಾಕತೊಡಗಿದಳು. ರಸ್ತೆಯುದ್ದಕ್ಕೂ ತೆಂಗಿನ ಮರಗಳು. ಮರಗಳ ಮೇಲೆ ಬೆಳ್ಳಿಯ ಹೂಗಳಂತೆ ಸೂರ್ಯಕಿರಣಗಳು. ಆಕೆ ಕಪ್ಪು ಸೀರೆ ಉಟ್ಟು ಸರೋವರದ ದಡದಲ್ಲಿದ್ದ 'ಛಿನ್ನ ಮಸ್ತ' ದೇವಿಯ ಆಲಯಕ್ಕೆ ಹೋಗುತ್ತಾಳೆ. ದೇವಸ್ಥಾನದ ಮುಂದೆ ಇರುವ ಹೂಮಾರುವ ಹೆಂಗಸರು ಅಕೆಯನ್ನು ಗುರುತು ಹಿಡಿದವರಂತೆ ಮುಗುಳ್ನಗುತ್ತಾರೆ. ಹೂವಿನ ಬುಟ್ಟಿ ತೆಂಗಿನಕಾಯಿಯೊಂದಿಗೆ ದೇವಸ್ಥಾನ ಪ್ರವೇಶಿಸಿದಳು. ಅರ್ಚಕ ಆಕೆಯ ಗುರುತು ಹಿಡಿದ. ಆತ ಹತ್ತು ವರ್ಷಗಳ ಹಿಂದೆ ಸತ್ತು ಹೋದ ಆಕೆಯ ಗಂಡನ ಆತ್ಮಕ್ಕೆ ಪೂಜೆ ಮಾಡುತ್ತಾನೆ. ನಿಜ ಹೇಳಬೇಕೆಂದರೆ ಆಕೆಗೆ ದೇವರು, ದೇವಸ್ಥಾನಗಳೆಂದರೆ ನಂಬಿಕೆ ಇಲ್ಲ. ಆದರೆ ಈ ಪೂಜೆ ಮಾಡಿಸುವುದು ಆಕೆಗೆ ಪ್ರಿಯವಾದ ಸೆಂಟಿಮೆಂಟ್. ಮಧ್ಯಾಹ್ನ ದೇವಸ್ಥಾನದ ಆವರಣದಲ್ಲಿರುವ ಸಾಧುಗಳಿಗೆ ಬೈರಾಗಿಗಳಿಗೆ, ಬಿಕ್ಷುಕರಿಗೆ, ಅರ್ಚಕರಿಗೆ ಹಣ ಕೊಡುತ್ತಾಳೆ. ದೇವಸ್ಥಾನದಿಂದ ಒಂದು ಫರ್ಲಾಂಗ್ ದೂರದಲ್ಲಿರುವ ಗಂಡನ ಸಮಾಧಿಯ ಬಳಿ ಹೋಗಿ ದೀಪ ಹಚ್ಚಿ, ಹೂಗಳಿಂದ ಅಲಂಕರಿಸಿ ಹತ್ತು ನಿಮಿಷ ಕುಳಿತುಕೊಳ್ಳುತ್ತಾಳೆ. ಅಲ್ಲಿಗೆ ಆಕೆ